ದಿನಾಂಕಃ **25-01-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಂ ವಕೀಲರಿಂದಃ

1. ದಿಃ13-01-1969 ಕ್ಕೆ ನಾನು ಜನಿಸಿರಲಿಲ್ಲ. ದಿಃ 13-01-1969 ರ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ದಿಃ 13-01-1939 ರ ಕ್ರಯಪತ್ರದ ಆಧಾರದ ಮೇರೆಗೆ ಬಿ.ಎಸ್. ಹನುಮಂತಯ್ಯನವರ ಹೆಸರಿಗೆ ಖಾತೆ ವರ್ಗಾವಣೆಯಾದ ಬಗ್ಗೆ ಮ್ಯುಟೇಶನ್ ಮತ್ತು ಆರ್ ಟಿ ಸಿ ಗಳನ್ನು ನಾನು ನೋಡಿರುವುದಿಲ್ಲ. ಈ ದಾವೆ ಹೂಡುವ ಸಮಯದಲ್ಲಿ ದಿಃ 13-01-1969 ರ ಕ್ರಯಪತ್ರದ ಆಧಾರದ ಮೇರೆಗೆ ಆದಂತಹ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆಯೇ ಎಂದು ತಿಳಿದುಕೊಂಡಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ದಿಃ13-01-1969 ರಂದು ದಾವಾ ಸ್ವತ್ತು ತಿಮ್ಮಯ್ಯ ಬಿನ್ ಕೋಡಿರಂಗಪ್ಪನವರಿಗೆ ಸೇರಿತ್ತು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ನನ್ನ ತಾತ ರಾಮಯ್ಯರವರ ಸ್ವಾಧೀನದಲ್ಲಿತ್ತು ಎಂಬುದಕ್ಕೆ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಾತ ರಾಮಯ್ಯ ತೀರಿಕೊಂಡ ನಂತರ ವಾದಿ ಹೆಸರಿಗೆ ವರ್ಗಾವಣೆಯಾದ ದಾವಾ ಸ್ವತ್ತಿನ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ದಿಃ13-01-1969 ಮತ್ತು ದಿಃ14-09-1970 ರ ಕ್ರಯಪತ್ರಗಳಲ್ಲಿ ಸರ್ವೇ ನಂ.150/ಪಿ7 ಎಂದು ನಮೂದಾಗಿರುತ್ತದೆ. ನನ್ನ ತಾತ 2010 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಸ್ವತ್ತಿನ ಹಳೇ ಸರ್ವೇ ನಂ. ನನಗೆ ಗೊತ್ತಿರುವುದಿಲ್ಲ. ದಾವಾ ಸರ್ವೇ ನಂ. ಎಷ್ಟು ಪೋಡುಗಳಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಮೂಲ ಸರ್ವೇ ನಂ.150 ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಉತ್ತರಿಸಿರುವುದಿಲ್ಲ. ಬೆಡತ್ತೂರು ಗ್ರಾಮದ ಸರ್ವೇ ನಂ.150 ರಲ್ಲಿ 4 ಪೋಡಿಗಳಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ.150 ನ್ನು ಸರ್ವೇ ನಂ.228, ಸರ್ವೇ ನಂ.223, ಸರ್ವೇ ನಂ.230 ಮತ್ತು ಸರ್ವೇ ನಂ.150

ಎಂದು ವಿಂಗಡಣೆ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.228 ರಲ್ಲಿನ ಒಟ್ಟು 10 ಎಕರೆ ಜಮೀನು 1 ನೇ ಪ್ರತಿವಾದಿಯ ಗಂಡ ತಿಮ್ಮಯ್ಯನ ಹೆಸರಿಗೆ ಸೇರಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.223 ರಲ್ಲಿನ 6 ಎಕರೆ ಜಮೀನಿನ ಖಾತೆ ಸಂಜೀವಪ್ಪ ಬಿನ್ ಹನುಮಂತರೆಡ್ಡಿಯವರ ಹೆಸರಿಗೆ ಖಾತೆಯಾಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.230 ರಲ್ಲಿ 5 ಎಕರೆ 20 ಗುಂಟೆ ಸರ್ಕಾರಿ ಖರಾಬು ಎಂದು ಸೂಚಿಸುವುದು ಸರಿಯಲ್ಲ. ಸರ್ವೇ ನಂ.150 ರಲ್ಲಿ 32 ಎಕರೆ 12 ಗುಂಟೆ ಖರಾಬು ಜಮೀನು ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

4. ಸರ್ವೇ ನಂ.150/ಪಿ7 ಎಂದು ಯಾವುದೇ ಪೋಡಿ ಯಾಗಿರುವುದಿಲ್ಲ ಮತ್ತು ಸದರಿ ಜಮೀನು ಅಸ್ತಿತ್ವದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ನೀವು ಅಳತೆ ಮಾಡಿಸಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ಉತ್ತರಿಸಿ ನಂತರ ಅಳತೆ ಮಾಡಿಸಲು ಹೋದಾಗ ತಿಮ್ಮಯ್ಯನ ಮಕ್ಕಳು ತೊಂದರೆ ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಯಾವ ದಿನಾಂಕದಂದು ಅಳತೆ ಮಾಡಿಸಲು ಹೋಗಿರುತ್ತೀರಾ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ದಿನಾಂಕ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

5. ದಾವಾ ಸ್ವತ್ತನ್ನು ಅಳತೆ ಮಾಡಿಸಲು ಸಲ್ಲಿಸಿದ ಅರ್ಜಿ ಮತ್ತು ಶುಲ್ಕ ಪಾವತಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2015 ರಲ್ಲಿ ದಾವಾ ಸ್ವತ್ತಿನಲ್ಲಿ ನಾವು ಯಾವುದೇ ಬೆಳೆ ಬೆಳೆದಿರುವುದಿಲ್ಲ ಮತ್ತು ಸ್ವಾಧೀನದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ 2015 ನೇ ಸಾಲಿನ ಆರ್ ಟಿ ಸಿ ಯನ್ನು ನೋಡಿರುತ್ತೇನೆ. 2014 ರಿಂದ 2017 ರವರೆಗೆ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ ಮತ್ತು ಯಾವುದೇ ಬೆಳೆ ಬೆಳೆದಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

6. ಪ್ರತಿವಾದಿಗಳು ಸರ್ವೇ ನಂ.228 ಕ್ಕೆ ಸಂಬಂಧಿಸಿದಂತೆ ಅದಾ.ನಂ.117/2016 ರಂತೆ ನಿಮ್ಮ ತಂದೆಯ ವಿರುದ್ಧ ದಾವೆಯನ್ನು ಹೂಡಿ ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತಾತ್ಕಾಲಿಕ ತಡೆಯಾಜ್ಞೆಯ ವಿರುದ್ಧ ನನ್ನ ತಂದೆ ಹೂಡಿದ್ದಂತಹ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ನನಗೆ

ಗೊತ್ತಿರುವುದಿಲ್ಲ. 2015 ರಲ್ಲಿ ನಾವು ದಾವಾ ಸ್ವತ್ತಿನಲ್ಲಿ ನಾವು ಹುರುಳಿ ಬೆಳೆ ಹಾಕಿರುತ್ತೇವೆ. ಹುರುಳಿ ಬೆಳೆಯ ಬಗ್ಗೆ ಆರ್ ಟಿ ಸಿ ಯಲ್ಲಿ ನಮೂದು ಮಾಡಿರುತ್ತಾರೆ.

7. ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ಪ್ರತಿವಾದಿಗಳು ನಮಗೆ ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ನಮಗೆ ಯಾವುದೇ ತೊಂದರೆ ನೀಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

8. ದಿಃ15-08-1940 ರಂದು ತಿಮ್ಮಯ್ಯನವರ ಅಣ್ಣ ಮುದ್ದರಂಗಪ್ಪ ಸರ್ವೇ ನಂ.150 ಹೊಸ ಸರ್ವೇ ನಂ.228 ರಲ್ಲಿನ 10 ಎಕರೆ ಜಮೀನನ್ನು ಹರಾಜಿನಲ್ಲಿ ಖರೀದಿಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಮುದ್ದರಂಗಪ್ಪ ತೀರಿಕೊಂಡ ನಂತರ ಸದರಿ 10 ಎಕರೆ ಜಮೀನು 1979 ರ ನಂತರ ತಿಮ್ಮಯ್ಯನವರಿಗೆ ಬಂದಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

9. ದಿಃ13-01-1969 ಮತ್ತು ದಿಃ 14-01-1970 ರಂದು ತಿಮ್ಮಯ್ಯ ಬಿನ್ ಕೋಡಿರಂಗಪ್ಪ ದಾವಾ ಸ್ವತ್ತಿನ ಮಾಲೀಕರಾಗಿರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಿಃ13-01-1969 ಮತ್ತು ದಿಃ 14-01-1970 ರ ಕ್ರಯಪತ್ರಗಳು ಸೃಷ್ಟಿ ಮಾಡಿರುವಂತಹ ಕ್ರಯಪತ್ರಗಳಾಗಿರುತ್ತವೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. _

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ